ಅವನು, 'ನೀನು ತುಂಬಾ ಗಟ್ಟಿಗಿತ್ತಿ, ಯಾಕೆ ಈಗ ಹೀಗಾದೆ? ನಿನ್ನ ತವರಿನವರು ತಮ್ಮ ಕೀರ್ತಿ, ಪ್ರತಿಷ್ಠೆಗಳ ಬಗೆಗೇ ಯೋಚಿಸ್ತಾ, ಇದಕ್ಕೆ ಬೇರೆ ಪರಿಹಾರವನ್ನೇ ಹುಡುಕುತ್ತಿಲ್ಲ. ಆದರೆ ನಾನು...' ಎಂದು ಅವಳನ್ನು ಸಂತೈಸುತ್ತಿದ್ದ. ಹೀಗೆ ಹೇಳುವಷ್ಟರಲ್ಲಿಯೇ ಅವನ ಗಂಟಲು ಕಟ್ಟಿತು. 'ನಾನೇನಾದರೂ ಮದುವೆಯಾಗಿರದಿದ್ದರೆ ಚೆನ್ನಾಗಿತ್ತು. ಆದರೆ ಈಗ ನೋಡು, ಕಾನೂನು ಇಬ್ಬರು ಹೆಂಡಿರಿಗೆ ಅವಕಾಶ ಕೊಡೊಲ್ಲ, ಹಾಗೇನಾದರೂ ಆಗಿದ್ದಿದ್ದರೆ, ಖಂಡಿತ ನಾನು ನಿನ್ನನ್ನು ಮದುವೆ ಮಾಡ್ಕೊಂಡು ಬಿಡ್ತಿದ್ದೆ' ಎಂದು ಮೆಲ್ಲನುಸುರಿದ.

'ಚಿಂತಿಸಬೇಡಿ! ನಾನು, ನನ್ನ ತವರಿನವರಿಗೆ ಹೇಳಿ ಬರ್ತೀನಿ' ಎಂದು ಮೆಲ್ಲಗಿನ ದನಿಯಲ್ಲಿ ಹೇಳಿ ಹೊರಡಲು ಅತ್ತ ತಿರುಗಿದಳು.

'ನಿಲ್ಲು, ಒಂದು ನಿಮಿಷ' ಎಂದು ಅವಳನ್ನು ತಡೆದು: 'ನೀನು ಇಂತಹ ದುಸ್ಥಿತಿಯಲ್ಲಿದ್ದೀಯಾ ಅಂತ ಮಾತ್ರವಲ್ಲ, ನನ್ನ ಅದೃಷ್ಟ ಚೆನ್ನಾಗಿಲ್ಲದ್ದರಿಂದ ಹೆಜ್ಜೆ ಹೆಜ್ಜೆಗೂ ಜಗಳ ಕಾಯುವ ಹೆಂಡತಿ ನನಗೆ ಸಿಕ್ಕಿದ್ದಾಳೆ. ಯಾರಾದರೂ ನನ್ನ ಹಳ್ಳಿಯವರು ನಾವಿಬ್ಬರೂ ಹೀಗೆ ಒಟ್ಟಿಗೆ ಕೂತು ಏಕಾಂತದಲ್ಲಿ ಮಾತನಾಡುವುದನ್ನು ನೋಡಿ ಹೋಗಿ ಅವಳಿಗೆ ಹೇಳಿದರೆ? ಇರಲಿ, ಆ ಬಾಯಿಬಡಕಿ ನಿನಗೇನೂ ಗೊತ್ತಿಲ್ಲದವಳೇನಲ್ಲ, ಹೌದಲ್ಲ? ಆ ದಿನ ಪಾತ್ರೆಗಳಿಗೆ, ದನಕರುಗಳಿಗಂತೂ ಕೆಟ್ಟದಿನ, ಅಂತಹ ಬೈಗುಳಗಳು ಹೇಗಿರ್ತವೆ ಅಂದ್ರೆ...' ಎಂದ.

'ಇವತ್ತು ನನಗೆ ಮನೇಲಿ ಹೆಂಗಿದೆಯೋ ಅಂತ ಗೊತ್ತಿಲ್ಲ' ಎಂದು ಅವಳು ಹೊರಡಲು ಅನುವಾದಳು.

ಅಲ್ಲಿಂದ ಅವಳಿನ್ನೂ ಒಂದೆರಡು ಹೆಜ್ಜೆಗಳನ್ನು ಮುಂದೆ ಇಟ್ಟಿರಲ್ಲಿಲ್ಲ, ಅಷ್ಟರೊಳಗೆ ಅವನು ಮತ್ತೆ ಅವಳನ್ನು ತಡೆದು, 'ನನ್ನ ಮಾತು ಕೇಳು, ಇವತ್ತಿನಿಂದ ಒಳ್ಳೆಯ ಹುಡುಗಿಯಂತೆ, ನಿನ್ನ ನಾದಿನಿಯನ್ನು ನಿನ್ನ ಒಡಹುಟ್ಟಿದ ತಂಗಿಯಂತೆಯೇ ಕಾಣಲು ಶುರುಮಾಡು. ನಿನ್ನ ಅತ್ತೆಯ ಎಲ್ಲಾ ಮಾತಿಗೂ ಗೌರವ ಕೊಡು. ನಿನ್ನ ಗಂಡನಿಂದಲೇ ನಿನ್ನ ಕಣ್ಣುಗಳು ಸಂತೋಷದಿಂದ ಮಿನುಗುತ್ತಿವೆ ಅನ್ನುವ ಭಾವನೆ ನಿನ್ನ ಗಂಡನಿಗೆ ಬರುವಂತೆ ನಡೆದುಕೋ. ನೀನು ಈಗ ನಿನ್ನ ತವರಿಗೆ ಒಂದು ತಿಂಗಳಿಗೋ, ಎರಡು ತಿಂಗಳಿಗೋ ಹೋಗುತ್ತಿದ್ದೀಯಲ್ಲಾ, ಅದನ್ನು ನಿಲ್ಲಿಸು. ಯಾಕೆಂದರೆ ನಿನ್ನ ತವರಿನವರೇನು ನಿನ್ನ ಕಷ್ಟದ ಬಗೆಗೆ ನಿಗಾ ತಂಗೊಂಡಿದ್ದಾರಾ? ಇಲ್ಲವಲ್ಲಾ? ಮತ್ಯಾಕೆ ಅಲ್ಲಿಗೆ ಹೋಗ್ತೀಯಾ? ಅವರು ನೀನು ಬರುವಂತೆ ಸುದ್ದಿ ಕಳಿಸಿದರೂ ನೀನು, ಮನೆಯಲ್ಲಿ ತುಂಬಾ ಕೆಲಸ, ಬಿಡುವಿಲ್ಲ ಅಂತ ಹೇಳು. ಆಗ ನಿನಗೆ ನಿನ್ನ ಗಂಡನ ಮನೆಯ ಬಗೆಗೆ ಹೆಚ್ಚು ಪ್ರೀತಿಯಿದೆ ಅಂತ ನಿನ್ನ ಅತ್ತೆಗೆ ಸಹ ನಿನ್ನ ಮೇಲೆ ನಂಬಿಕೆ ಬರ್‍ತದೆ. ನೀನು ನನ್ನ ಬಗ್ಗೆ ಒಂದು ಮಾತನ್ನೂ ಆಡಬಾರದು. ಎಲ್ಲಾದರೂ ನಾವು ಒಬ್ಬರಿಗೊಬ್ಬರು ಸಿಕ್ಕರೂ ನೀನು ನನ್ನನ್ನು ನೋಡದೆ ಮುಖವನ್ನು ಆ ಕಡೆಗೆ ತಿರುಗಿಸಿಕೊಂಡು ಸುಮ್ಮನೆ ಹೊರಟುಹೋಗು ಅರ್ಥವಾಯಿತಾ?" ಎಂದ. ಅದಕ್ಕವಳು 'ಇನ್ನೇನಾದರೂ ಉಳಿದಿದೆಯಾ?' ಎಂದಳು.

'ನೀನು ಒಂದು ಸಲ ಅವರ ನಂಬಿಕೆಯನ್ನು ಗಳಿಸಿಬಿಟ್ಟರೆ ಸಾಕು, ಒಂದು ದಿನ ನಾವಿಬ್ಬರೂ ಎಲ್ಲಾದರೂ ದೂರ ಓಡಿಹೋಗಿ ಅವರಿಗೆ ಆಶ್ಚರ್ಯ ಹುಟ್ಟಿಸಬಹುದು' ಎಂದ.

ಅವನ ಆ ಕೊನೆಯ ಮಾತನ್ನು ಕೇಳುತ್ತ ಅವೇಶದಿಂದ ಕೆರಳಿದ ಅವಳ ಮುಖ ವ್ಯಗ್ರವಾಯಿತು. ಅವಳು: 'ಉಂ! ಯಾರೇ ಆದರೂ ಎಲ್ಲವನ್ನೂ ಬಿಡಬಹುದು, ಆದರೆ...'

'ಹಾಗಾದರೆ ನೀನು ನರಕವನ್ನು ಅನುಭವಿಸಬೇಕಾಗ್ತದೆ, ಒಂದಿಷ್ಟಾದರೂ ಯೋಚಿಸು, ನಿನ್ನ ಗಂಡ ಇಲ್ಲಿಂದ ಎರಡು ಮೈಲಿ ದೂರದಲ್ಲಿದ್ದಾನೆ. ಆದರೆ, ಅವನು ತನ್ನ ಕುಕ್ಕುವ ಕಣ್ಣುಗಳಿಂದ ಏನು ಮಾಡ್ತಾನೆ ಅನ್ನುವುದನ್ನು ಕಾದು ನೋಡು' ಎಂದ.

'ಇರಬಹುದು! ಯಾರಾದರೂ ನಮ್ಮೂರಿನವರು ಹೋಗಿ ಅವನಿಗೆ ಹೇಳಿದರೆ ಸಾಕು, ಅವನು ನನ್ನ ಚರ್ಮವನ್ನು ಸುಲಿದುಬಿಡ್ತಾನೆ. ನಿನ್ನ ಹೆಸರನ್ನು ಕೇಳುತ್ತಿದ್ದ ಕ್ಷಣದಲ್ಲೇ ಕೋಪದಿಂದ ನನ್ನನ್ನು ಸುಟ್ಟುಬಿಡ್ತಾನೆ'.

'ಹಾಗಾದರೆ, ಸರಿ. ನಾನು ಹೇಳಿದಂತೆ ಆರು ತಿಂಗಳು ಮಾಡು'ಎಂದ. 'ನೀನೇನು ಮಾಡ್ತೀಯಾ?' ಎಂದವಳು ಕೇಳಿದ್ದಕ್ಕೆ, ಅವನು ಬಹಳ ಅಚಲವಾದ ನಿರ್ಧಾರದಿಂದ ಕೂಡಲೇ: 'ನಾನು ಸರಿಯಾಗೇ ಮಾಡ್ತೀನಿ, ನೀನು ನಿನ್ನ ತವರನ್ನು ಬಿಡಬೇಕು, ಇಲ್ಲ